ಊ) ಯಾವಾಗ ಇದು ಪೂರ್ಣಗೊಳ್ಳಬಹುದು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು, ಕೊಡಗು ಜಿಲ್ಲೆಯಲ್ಲಿ ರೀ-ಸರ್ವೆ ತೆಗೆದುಕೊಂಡಿರುವುದು ನಿಜ.

ಆ) ಈ ಕೆಲಸವು ಅಕ್ಟೋಬರ್ ೧೯೭೮ರಿಂದ ಪ್ರಾರಂಭವಾಗಿದೆ.

ಇ) ೧೨೧ ಗ್ರಾಮಗಳಲ್ಲಿ ರೀ-ಸರ್ವೆ ಕೆಲಸ ಪೂರ್ಣಗೊಂಡಿದೆ.

ಈ) ೬೨ ಗ್ರಾಮಗಳಿಗೆ ಅಂತಿಮ ದಾಖಲೆಗಳನ್ನು ೧೯೮೫ರ ಜುಲೈ ತಿಂಗಳವರೆವಿಗೆ ತಯಾರಿ ಸಲಾಗಿದೆ.

ಉ) ದಿನಾಂಕ ೧-೪-೮೫ರವರೆಗೆ ಒಟ್ಟು ೧,೮೪,೯೦, ೨೯೮.೮೫ ರೂಪಾಯಿಗಳು ಖರ್ಚಾ ಗಿರುತ್ತದೆ. ಅಂದಾಜಿನ ಪ್ರಕಾರ ಒಂದು ಎಕರೆಗೆ ಸುಮಾರು ರೂ. ೩೦೦ ರಿಂದರೂ.೪೦೦ಗಳವರೆವಿಗೆ ತಗಲುತ್ತದೆ.

ಊ) ಉಳಿದಿರುವ ರೀ-ಸರ್ವೆ ಕೆಲಸ ಪೂರೈಸಲು ಸುಮಾರು ೧೨ ರಿಂದ ೧೫ ವರ್ಷಗಳು ಬೇಕಾಗಬಹುದು.

ಶ್ರೀ ಡಿ. ಎ. ಚಿನ್ನಪ್ಪ.— ಸೋಮವಾರಪೇಟೆ ಒಂದು ಸಣ್ಣ ತಾಲ್ಲೂಕು. ಅಲ್ಲಿ ಮೂರು ವರ್ಷ ದಿಂದ ಸರ್ವೆ ಕೆಲಸ ಮುಗಿದಿಲ್ಲ. ಅಲ್ಲಿ ಸರ್ವೆ ಮಾಡತಕ್ಕ ಸರ್ವೆ ಅಧಿಕಾರಿಗಳು, ಸರ್ವೇಯರುಗಳು ಬಹಳ ನಿಧಾನವಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಸತತವಾಗಿ ಒಂದು ಗಂಟೆ ಅಥವಾ ಎರಡು ಗಂಟೆ ಕೆಲಸ ಮಾಡಿ ಬಾಕಿ ಸಮಯ ವ್ಯರ್ಥ ಮಾಡುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಸೋಮವಾರಪೇಟೆಯ ೧೨೧ ಗ್ರಾಮಗಳಲ್ಲಿ ಸರ್ವೆ ಕೆಲಸ ಮುಗಿದಿದೆ. ೧೯೮೨ರಲ್ಲಿ ಸರ್ವೆ ಕೆಲಸ ಪ್ರಾರಂಭವಾದದ್ದು. ಇಲ್ಲಿ ಸರ್ವೆ ಕೆಲಸ ಮುಗಿಯಲಿಕೆ ಮುಖ್ಯವಾದ ತೊಂದರೆ ಏನಾಗಿದೆ ಅಂದರೆ ಕೊಡಗಿನಲ್ಲಿ ೬ ತಿಂಗಳು ಮಳೆ ಇರುತ್ತದೆ. ಅಲ್ಲದೆ ಅದ್ಕ ಗುಡ್ಡಗಾಡು ಪ್ರದೇಶವಾದ್ದರಿಂದ ಸರ್ವೆ ಕೆಲಸ ನಿಧಾನವಾಗುತ್ತಿದೆ. ಸರ್ವೆ ಕೆಲಸವನ್ನು ಬಹಳ ತ್ವರಿತಗತಿಯಿಂದ ಮಾಡಲಾಗುತ್ತಿದ್ದಾರೆ, ಆದರೂ ಸಮಯ ಬೇಕಾಗುತ್ತದೆ.

ವೇದಾವತಿ ಮತ್ತು ಸುವರ್ಣಮುಖಿ ನದಿಗಳ ಜಲಾನಯನ ಪ್ರದೇಶದಲ್ಲಿನ ಒತ್ತುವರಿಯನ್ನು ತೆರವು ಮಾಡಿಸುವುದು.

೭೫೯. ಶ್ರೀ ಆರ್. ರಾಮಯ್ಯ (ಹಿರಿಯೂರು).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಹಿರಿಯೂರು ತಾಲ್ಲೂಕಿನ ವಾಣಿ ವಿಲಾಸಪುರ ಮತ್ತು ಕರಿಯಾಲದ ಬಳಿ ಹರಿಯುವ ವೇದಾವತಿ ಮತ್ತು ಸುವರ್ಣ ಮುಖಿ ನದಿಗಳು ಹರಿಯುವ ಪಕ್ಕದಲ್ಲಿರುವ ಜನರಿಗೆ ಒತ್ತುವರಿ ಮಾಡಿ ಕೊಂಡು ಸಾಗುವಳಿ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಒತ್ತುವರಿ ಮಾಡಿಕೊಂಡು ಸಾಗುವಳಿಯಾಗುತ್ತಿರುವ ನದಿಗಳ ಪಕ್ಕದ ಜಮೀನುಗಳ ಮೇಲೆ ಕಂದಾಯವನ್ನು ವಿಧಿಸಲಾಗಿದೆಯೇ?

ಇ) ನದಿಗಳ ಮಂಜಿನ ಭೂಮಿಯ ಪಹಣಿ ಇರುವಾಗ ಒತ್ತುವರಿಯಾಗಿರುವ ನದಿಯ ಜಲಾ ಶಯದ ಪ್ರದೇಶವನ್ನು ಗುರುತಿಸಿ ಸದರಿ ಪ್ರದೇಶವನ್ನು ತೆರವು ಮಾಡಿಸಿ ನದಿಗಳು ಸರಾಗವಾಗಿ ಹರಿ ಯಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹಿರಿಯೂರು ತಾಲ್ಲೂಕಿನಲ್ಲಿ ವೇದಾವತಿ ಮತ್ತು ಸುವರ್ಣ ಮುಖಿ ನದಿಗಳು ಹರಿಯುತ್ತಿರುವ ದಂಡೆ ಪ್ರದೇಶದಲ್ಲಿ ಅನಧಿಕೃತವಾಗಿ ಹಾಗೂ ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡುತ್ತಿರುವುದು ತಿಳಿದು ಬಂದಿದೆ.

ಆ) ಸದರಿ ನದಿಗಳ ದಂಡೆಯ ಪ್ರದೇಶವನ್ನು ಒತ್ತುವರಿ ಮಾಡಿರುವವರ ಮೇಲೆ ಯಾವ ಕಂದಾಯವನ್ನು ವಿಧಿಸಿರುವುದಿಲ್ಲ.

ಇ) ಈಗಾಗಲೇ ಸ್ಥಳೀಯ ಜನರ ಅಹವಾಲು (ದೂರು) ಮೇರೆಗೆ ಹರಿಯೂರು ಸಮೀಪವಿರುವ ಸುಮಾರು ೧೫ರಿಂದ ೨೦ ಎಕರೆ ಒತ್ತುವರಿ ಭೂಮಿಯನ್ನು ಖುಲ್ಲಾ ಪಡಿಸಲಾಗಿದೆ. ಮತ್ತು ಉಳಿದಿರುವ ಒತ್ತುವರಿ ಹಾಗೂ ಅನಧಿಕೃತ ಸಾಗುವಳಿದಾರರನ್ನು ಖುಲ್ಲಾಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಆರ್. ರಾಮಯ್ಯ.— (ಆ) ಪ್ರಶ್ನೆಗೆ ಉತ್ತರವಾಗಿ ಎರಡು ನದಿಗಳ ದಂಡೆಯ ಪ್ರದೇಶದಲ್ಲಿ ಅನಧಿಕೃತವಾಗಿ ಜಮೀನನ್ನು ಒತ್ತುವರಿ ಮಾಡಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅವರು ನದಿಯನ್ನೇ ಒತ್ತುವರಿ ಮಾಡಿದ್ದಾರೆಂದು ಹೇಳಬೇಕಾಗಿದೆ. ಈಗ ಆ ನದಿ ಒಂದು ಚರಂಡಿ ರೀತಿಯಲ್ಲಿ ಕಾಣುತ್ತಿದೆ. ಈ ರೀತಿ ಒತ್ತುವರಿ ಮಾಡಿರುವುದರಿಂದ ಸಾರ್ವಜನಿಕರ ಉಪಯೋಗಕ್ಕೆ ಮತ್ತು ದನ ಕರುಗಳಿಗೆ ಬಹಳ ತೊಂದರೆಯಾಗಿರುವುದು ಸಚಿವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳುವುದರಲ್ಲಿ ಸಂತ್ಯಾಂಶ ಇದೆ. ಈಗಾಗಲೇ ೨೦ ಎಕರೆ ಅತಿಕ್ರಮಣ ಮಾಡಿದವರನ್ನು ಹೊರಕ್ಕೆ ಹಾಕಿದ್ದೇವೆ. ಇನ್ನುಳಿದವರು ಯಾರು ಮಾಡಿದ್ದಾರೆ ಅವರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್, ರಾಮಯ್ಯ.—ಒತ್ತುವರಿ ಮಾಡಿರುವವರ ಮೇಲೆ ಯಾವ ಕಂದಾಯವನ್ನು ವಿಧಿಸಿರುವುದಿಲ್ಲ ಎಂದು ಹೇಳಿದ್ದಾರೆ. ಒತ್ತುವರಿ ಮಾಡಬಾರದೆಂಬ ಸರ್ಕಾರದ ಸುತ್ತೋಲೆಯನ್ನು ಜನರು ಉಲ್ಲಂಘನೆ ಮಾಡಬೇಕಾದರೆ ಸಂಬಂಧಪಟ್ಟವರ ಕುಮ್ಮಕ್ಕು ಇದ್ದೇ ಇರುತ್ತದೆ. ಅಲ್ಲಿ ಅವರು ಒತ್ತುವರಿ ಮಾಡಿ ಸಾಗುವಳಿ ಮಾಡಬೇಕಾದರೆ ಅಧಿಕಾರಿಗಳು ಇಂತಿಷ್ಟು ಹಣ ಪಡೆದಿದ್ದಾರೆಂದು ತಿಳಿದು ಬಂದಿದೆ. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅತಿಕ್ರಮಣ ಮಾಡಿದ್ದರೆ ಅವರನ್ನು ಹೊರಕ್ಕೆ ಹಾಕಬೇಕಾಗುತ್ತದೆ. ಇಲ್ಲಿ ದಂಡ ಹಾಕುವ ಪ್ರಶ್ನೆಯೇ ಇಲ್ಲ. ಯಾವುದೇ ಅಧಿಕಾರಿ ಕಾನೂನು ಬಾಹಿರವಾಗಿ ಹಣ ಪಡೆದಿದ್ದರೆ ವಿಚಾರಣೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ರಾಮಯ್ಯ.—ವಾಣಿವಿಲಾಸಪುರದಿಂದ ವೇದಾವತಿ ನದಿ ಏನು ಹರಿಯುತ್ತಿದೆ, ಆ ನದಿ ಉದ್ದಕ್ಕೂ ರೈತರು ಅನಧಿಕೃತವಾಗಿ ಸಾಗುವಳಿ ಮಾಡಿದ್ದಾರೆ. ಅವರನ್ನು ಅಲ್ಲಿಂದ ಖಾಲಿ ಮಾಡಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದಂತೆ ಅತಿಕ್ರಮಣ ಮಾಡಿದವರನ್ನು ಹೊರಕ್ಕೆ ಹಾಕಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ರಾಮಯ್ಯ.—ಅಲ್ಲಿ ಅವರನ್ನು ಖಾಲಿ ಮಾಡಿಸಿದ ತಕ್ಷಣ ಮತ್ತೆ ಸಾಗುವಳಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಆದಕ್ಕೋಸ್ಕರ ಅಲ್ಲಿ ಅಫೋರ್‌ಸ್ಟೇಷನ್ ಮಾಡಲಿಕ್ಕೆ ಮುರಗಳನ್ನು ಬೆಳಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ೧೫ ಎಕರೆಯಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಬರಗಾಲದ ಇದರಲ್ಲಿ ಅಫೋರ್‌ಸ್ಟೇಷನ್ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಮುಂದೆ ನಾವು ಪೊಸಿಷನ್ ತೆಗೆದುಕೊಂಡ ಮೇಲೆ ಅಲ್ಲಿ ಕೂಡ ಅದೇ ರೀತಿ ಮಾಡುತ್ತೇವೆ.

ಯಾದಗಿರಿ ಹೊಸ ಬಡಾವಣೆಗಳಿಗೆ ವಿದ್ಯುತ್ ದೀಪಗಳನ್ನು ಹಾಕಿಸುವ ಬಗ್ಗೆ.

೬೭೮. ಶ್ರೀ ಮಲ್ಲಿಕಾರ್ಜುನ ಖಾರ್ಗೆ (ಗುರುಮಿಠಕಲ್).—ಮಾನ್ಯ ವಿದ್ಯುತ್ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಯಾದಗಿರಿ ಪುರಸಭೆಯವರಿಂದ ಹೊಸ ಬಡಾವಣೆಗಳಲ್ಲಿ ವಿದ್ಯುತ್ ಕಂಬಗಳನ್ನು ಹಾಕಲು ಮನವಿ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ?